## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 16-11-2022

### ಬೀದರ ನೂತನ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 198/2022 ಕಲಂ 379 ಐಪಿಸಿ :-

ದಿನಾಂಕ 15/11/2022 ರಂದು 13:45 ಗಂಟೆಗೆ ಫಿರ್ಯಾದುದಾರರಾದ ಶ್ರೀ. ಪ್ರತಾಪರೆಡ್ಡಿ ತಂದೆ ಗೋವಿಂದರೆಡ್ಡಿ ವಯ:38 ವರ್ಷ ಜಾತಿ:ರೆಡ್ಡಿ ಉ:ಆಟೊ ಡ್ರೈವರ ಕೆಲಸ ಸಾ/ಚೌಧರಿಬೆಳಕುಣಿ ಸಧ್ಯ ನಾವದಗೇರಿ ಬೀದರ ಇವರು ಠಾಣೆಗೆ ಹಾಜರಾಗಿ ನೀಡಿದ ದೂರಿನ ಸಾರಾಂಶವೆನೆಂದರೆ, ಒಂದು ಟಾಟಾ ಏಸ್ ಆಟೊ ನಂ.ಕೆಎ38/5831 ನೇದನ್ನು 2010 ಸಾಲೀನಲ್ಲಿ ಖರೀದಿಸಿದ್ದು, ಅದನ್ನು ಫರ್ಯಾದಿ ಹೆಸರಿನಲ್ಲಿ ನೊಂದಾಯಿಸಿದ್ದು ಇರುತ್ತದೆ. ನಾವದಗೇರಿ ಬೀದರನಲ್ಲಿ ಇರುವ ಶ್ರೀ. ಅನುಪ ನಾಗೂರೆ ಇವರ ಮನೆಯಲ್ಲಿ ಬಾಗಿಗೆಯಿಂದ ವಾಸಿಸುತಿದ್ದು ಹೀಗಿರುವಾಗ ದಿನಾಂಕ 12/11/2022 ರಂದು ಕೆಲಸ ಮುಗಿಸಿಕೊಂಡು ರಾತ್ರಿ 11:00 ಪಿ.ಎಮ ಗಂಟೆಯ ಸಮಯಕ್ಕೆ ಆಟೊವನ್ನು ಮನೆಯ ಮುಂದೆ ನಿಲ್ಲಿಸಿ ಊಟ ಮಾಡಿ ರಾತ್ರಿ ಮನೆಯಲ್ಲಿ ಮಲಗಿಕೊಂಡಿದ್ದು, ದಿನಾಂಕ 13/11/2022 ರಂದು ಮುಂಜಾನೆ 7:00 ಎ.ಎಮ್. ಗಂಟೆಯ ಸುಮಾರಿಗೆ ಎದ್ದು, ಮನೆಯಿಂದ ಹೊರಗೆ ಬಂದು ನೋಡಿದಾಗ ಆಟೊ ಇಟ್ಟಿದ್ದ ಜಾಗದಲ್ಲಿ ಇದ್ದಿರುವದಿಲ್ಲ. ನಂತರ ಕಳವು ಆದ ಆಟೊವನ್ನು ಎಲ್ಲಾ ಕಡೆಗೆ ಹುಡುಕಾಡಲಾಗಿ ಎಲ್ಲಿಯೂ ಸಿಗಲಿಲ್ಲ. ಕಳ್ಳತನವಾದ ಆಟೊ ವಿವರ ಹೀಗಿರುತ್ತದೆ: ಟಾಟಾ ಏಸ ಆಟೊ ನಂ. ಕೆಎ-38-5831 ಚಾ.ನಂ. ಎಮ್.ಎ.ಟಿ.445111ಎವಿಎಚ್58392 ಇಂಜಿನ್ ನಂ. 2751ಡಿ1ಎಚ್ಝುಡ್ವೈಎಸ್ಬಿ6848, ಅಂದಾಜು ಕಿಮ್ಮತ್ತು ರೂ-1,00,000/-ರೂ ಆಗಿರುತ್ತದೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.